**ಕರ್ನಾಟಕ ಸರ್ಕಾರ**
**(ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ)**

ಸಂಖ್ಯೆ: ಆಔಆ/27/ಯೋಜನೆ/2025

ಆಯುಕ್ತರ ಕಚೇರಿ,
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 06 AUG 2026

ಇವರಿಗೆ,
ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೇ,

ವಿಷಯ: 2026 ನೇ ಶೈಕ್ಷಣಿಕ ಸಾಲಿನ ಬಿ.ಫಾರ್ಮ ಹಾಗೂ ಫಾರ್ಮ.ಡಿ ಕೋರ್ಸುಗಳ ಸೀಟ್ ಮ್ಯಾಟ್ರಿಕ್ಸ್/ಶುಲ್ಕ ಮಾಹಿತಿ ಕುರಿತು.

ಉಲ್ಲೇಖ: 1) ಕೆಇಎ ಪತ್ರ ಸಂ.ಇಡಿ/ಕೆಇಎ/ಸೀಟ್ ಮ್ಯಾಟ್ರಿಕ್ಸ್/2026, ದಿನಾಂಕ: 16.04.2026.
2) ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಲಯ, ಬೆಂಗಳೂರು ರವರ ಪತ್ರ ಸಂಖ್ಯೆ: ಆಸುಔಆ/ಸಔವಿಮವಿ/ಆವಿ-08/ 2026-27, ದಿನಾಂಕ: 22.06.2026.
3) ಕಾರ್ಯವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಇಡಿ/ಕೆಇಎ/ಸೀಟ್ ಮ್ಯಾಟ್ರಿಕ್ಸ್/ಸಿಆರ್06/ 2026, ದಿನಾಂಕ: 05.08.2026.

*********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2026ನೇ ಶೈಕ್ಷಣಿಕ ಸಾಲಿನ ಡಿ.ಫಾರ್ಮ, ಬಿ.ಫಾರ್ಮ, ಬಿ.ಫಾರ್ಮ (ಲ್ಯಾಟರಲ್ ಎಂಟ್ರಿ), ಫಾರ್ಮ.ಡಿ, ಫಾರ್ಮ.ಡಿ (ಪೋಸ್ಟ್ ಬ್ಯಾಕಲಾರಿಯೇಟ್) ಹಾಗೂ ಎಂ.ಫಾರ್ಮ ಕೋರ್ಸುಗಳ ಸೀಟ್ ಮ್ಯಾಟ್ರಿಕ್ಸ್/ಶುಲ್ಕ ವಿವರಗಳ ಕುರಿತು ಈ ಕೆಳಗಿನ ಮಾಹಿತಿಯನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗುತ್ತಿದೆ.

1. ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಡಿ.ಫಾರ್ಮ, ಬಿ.ಫಾರ್ಮ, ಬಿ.ಫಾರ್ಮ (ಲ್ಯಾಟರಲ್ ಎಂಟ್ರಿ), ಫಾರ್ಮ.ಡಿ, ಫಾರ್ಮ.ಡಿ (ಪೋಸ್ಟ್ ಬ್ಯಾಕಲಾರಿಯೇಟ್) ಹಾಗೂ ಎಂ.ಫಾರ್ಮ ಕೋರ್ಸುಗಳ ಸರ್ಕಾರಿ ಕೋಟಾ ಸೀಟುಗಳಿಗೆ ಶುಲ್ಕವನ್ನು ನಿಗದಿಪಡಿಸಿ, ಸರ್ಕಾರದ ಆದೇಶ ಸಂಖ್ಯೆ: ಆಕುಕ 123 ಐಎಂಎಂ 2023, ದಿನಾಂಕ: 01.09.2023ರ ಮೂಲಕ ಆದೇಶ ಹೊರಡಿಸಲಾಗಿದೆ.
2. ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಡಿ.ಫಾರ್ಮಸಿ ಕೋರ್ಸಿನ ಸರ್ಕಾರಿ ಕೋಟಾ ಸೀಟುಗಳ ಹಂಚಿಕೆ ಅನುಪಾತ ಹಾಗೂ ಶುಲ್ಕವನ್ನು ನಿಗದಿಪಡಿಸಿ, ಸರ್ಕಾರದ ಆದೇಶ ಸಂಖ್ಯೆ: ಆಕುಕ 122 ಐಎಂಎಂ 2025, ಬೆಂಗಳೂರು, ದಿನಾಂಕ: 11.12.2025ರ ಮೂಲಕ ಆದೇಶ ಹೊರಡಿಸಲಾಗಿದೆ.

3. ಈ ಇಲಾಖೆಯು ಸರ್ಕಾರಿ ಫಾರ್ಮಸಿ ವಿದ್ಯಾಲಯಗಳು, ಖಾಸಗಿ ಫಾರ್ಮಸಿ ವಿದ್ಯಾಲಯಗಳು ಹಾಗೂ ಕರ್ನಾಟಕ ಸರ್ಕಾರದ ವ್ಯಾಪ್ತಿಯ ಖಾಸಗಿ ವಿಶ್ವವಿದ್ಯಾಲಯಗಳ ಫಾರ್ಮಸಿ ಕೋರ್ಸುಗಳಿಗೆ ಮಾತ್ರ ಸೀಟ್ ಮ್ಯಾಟ್ರಿಕ್ಸ್ ಸಿದ್ಧಪಡಿಸಿ ಅಧಿಸೂಚನೆ ಹೊರಡಿಸುತ್ತದೆ.
4. **Deemed to be Universities**ಗಳ ಸೀಟ್ ಮ್ಯಾಟ್ರಿಕ್ಸ್ ಈ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ ಹಾಗೂ ಈ Deemed to be Universitiesಗಳಿಗೆ ಯಾವುದೇ ಸೀಟ್ ಹಂಚಿಕೆ ಮಾಡುವುದಿಲ್ಲ.
5. ಪ್ರಸ್ತುತ ಪರಿಸ್ಥಿತಿಯಲ್ಲಿ ಖಾಸಗಿ ವಿದ್ಯಾಲಯಗಳು ಹಾಗೂ ಕರ್ನಾಟಕ ರಾಜ್ಯ ಖಾಸಗಿ ವಿಶ್ವವಿದ್ಯಾಲಯಗಳನ್ನು ಪ್ರತ್ಯೇಕವಾಗಿ ಪರಿಗಣಿಸದೆ, ಎಲ್ಲಾ ಫಾರ್ಮಸಿ ಕಾಲೇಜುಗಳಿಗೆ ಒಂದೇ ಶುಲ್ಕವನ್ನು ನಿಗದಿಪಡಿಸಲಾಗಿದೆ.
6. ನಿಗದಿಪಡಿಸಿರುವ ಶುಲ್ಕದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇವರಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಶುಲ್ಕಗಳು ಒಳಗೊಂಡಿರುತ್ತವೆ.
7. 2026ನೇ ಶೈಕ್ಷಣಿಕ ಸಾಲಿಗೆ ಯಾವುದೇ ಶುಲ್ಕ ಪರಿಷ್ಕರಣೆ ಆಗದಿರುವುದರಿಂದ, ಮೇಲ್ಕಂಡ ಆದೇಶಗಳ ಪ್ರಕಾರವೇ ಶುಲ್ಕವನ್ನು ಪರಿಗಣಿಸಬೇಕಾಗಿ ತಿಳಿಸಲಾಗಿದೆ.
8. ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿಗೆ ಸಂಬಂಧಿಸಿದಂತೆ, ಪ್ರಾಂಶುಪಾಲರು ಸಲ್ಲಿಸಿರುವ ಶುಲ್ಕ ವಿವರಗಳನ್ನು ಪರಿಗಣಿಸಬೇಕಾಗಿ ಕೋರಲಾಗಿದೆ.

**ತಮ್ಮ ವಿಶ್ವಾಸಿ,**

**ಆಯುಕ್ತರು,**
**ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ,**
**ಬೆಂಗಳೂರು.**

ಪ್ರತಿಯನ್ನು,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
2. ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ರವರ ಮಾಹಿತಿಗಾಗಿ.
3. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರವು ನಿಗದಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕದ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

1/9/13
(ಎನ್. ಪುಷ್ಪ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ.&ಎಸ್.ಎಸ್.ಎ/ಇ&ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ 5329, ಬೆಂಗಳೂರು 560001.
3. ಕಾರ್ಯನಿರ್ವಾಹಕ, ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
4. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
5. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
6. ಸದಸ್ಯ ಕಾರ್ಯದರ್ಶಿಗಳು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು.
7. ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಡಿ.ಸುಬ್ಬಯ್ಯ ವೃತ್ತ, ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ಫಾರ್ಮಸಿ ಕಾಲೇಜು ಮ್ಯಾನೇಜ್ ಮೆಂಟ್ ಅಸೋಸಿಯೇಷನ್, ನರಗುಂದ್ ಕಾಲೇಜ್ ಆಫ್ ಫಾರ್ಮಸಿ, ದತ್ತಾತ್ರೇಯ ನಗರ, 2ನೇ ಮೇನ್, 100 ಅಡಿ ರಿಂಗ್ ರಸ್ತೆ, ಬನಶಂಕರಿ, 2ನೇ, ಹಂತ ಬೆಂಗಳೂರು.
9. ಸಂಬಂಧಪಟ್ಟ ಎಲ್ಲಾ ಫಾರ್ಮಸಿ ಕಾಲೇಜುಗಳ ಪ್ರಾಂಶುಪಾಲರು (ಔಷಧ ನಿಯಂತ್ರಕರ ಮುಖಾಂತರ).
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.

## ಕರ್ನಾಟಕ ಸರ್ಕಾರದ ನಡೆವಳಿಗಳು

ವಿಷಯ: 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಎಲ್ಲಾ ಫಾರ್ಮಸಿ ಕೋರ್ಸುಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಸೀಟು ಅನುಪಾತ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ಶುಲ್ಕ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಆಕುಕ 73 ಪಿಟಿಡಿ 2021, ಬೆಂಗಳೂರು, ದಿನಾಂಕ: 10-11-2021.
2. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ. ಔನಿಇ/103/ಯೋಜನೆ/2021-22, ದಿನಾಂಕ: 24.07.2023
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 04-08-2023 ರಂದು ನಡೆದ ಸಭಾ ನಡವಳಿ.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ ಖಾಸಗಿ ಫಾರ್ಮಸಿ ಶಿಕ್ಷಣ ಸಂಸ್ಥೆಗಳಲ್ಲಿರುವ ಡಿ.ಫಾರ್ಮಸಿ, ಬಿ.ಫಾರ್ಮಸಿ, ಬಿ.ಫಾರ್ಮಸಿ (ಲ್ಯಾಟರಲ್ ಎಂಟ್ರಿ), ಫಾರ್ಮ.ಡಿ, ಫಾರ್ಮ.ಡಿ (ಪೋಸ್ಟ್ ಬ್ಯಾಕ್ಯುಲರೇಟ್) ಮತ್ತು ಎಂ.ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಸೀಟು ಅನುಪಾತ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ಶುಲ್ಕವನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪ್ರಸ್ತಾವನೆಯಲ್ಲಿ ಔಷಧ ನಿಯಂತ್ರಕರು ಈ ಕೆಳಕಂಡ ಮಾಹಿತಿಯನ್ನು ತಿಳಿಸಿರುತ್ತಾರೆ.

1. ಸೀಟು ಹಂಚಿಕೆ ಅನುಪಾತವು 2018-19 & 2019-20 ರಲ್ಲಿ ಪರಿಷ್ಕರಣೆಗೊಂಡಿದ್ದು, ನಂತರ ಪರಿಷ್ಕರಣೆಯಾಗಿರುವುದಿಲ್ಲ. ನಂತರ (2020-21, 2021-22, 2022-23) 03 ವರ್ಷಗಳ ಕಾಲ ಪರಿಷ್ಕರಣೆಗೊಂಡಿರುವುದಿಲ್ಲ.

2. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆ.ಇ.ಎ) ಮತ್ತು ಪರೀಕ್ಷಾ ಪ್ರಾಧಿಕಾರ ಮಂಡಳಿ (ಬಿ.ಇ.ಎ) ಯವರು ಸರ್ಕಾರಿ ಕೋಟಾದ ಸೀಟುಗಳನ್ನು ಹಂಚಿಕೆ ಮಾಡಿ ಭರ್ತಿಮಾಡಿರುವ ಶೇಖಡವಾರು ಸೀಟುಗಳ ವಿವರ:- ಡಿ.ಫಾರ್ಮ 14%, ಬಿ.ಫಾರ್ಮ 56%, ಎಂ.ಫಾರ್ಮ 71%, ಫಾರ್ಮ-ಡಿ 91%.

3. ಮುಂದುವರೆದು, ರಾಜ್ಯದ ಫಾರ್ಮಸಿ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘದವರು ಕಳೆದ 03 ವರ್ಷಗಳಿಂದ ಸರ್ಕಾರಿ ಕೋಟಾದ ಸೀಟುಗಳ ಶುಲ್ಕ ಪರಿಷ್ಕರಣೆಯಾಗಿರುವುದಿಲ್ಲವೆಂದು ಮತ್ತು ಪ್ರತಿ ವರ್ಷಕ್ಕೆ 10% ರಂತೆ ಶುಲ್ಕದಲ್ಲಿ ಪರಿಷ್ಕರಣೆ ಮಾಡುವಂತೆ ಕೋರಿರುತ್ತಾರೆ. ಈ ಎಲ್ಲಾ ಮಾಹಿತಿಗಳನ್ನು ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ.

.......2

| Sl. No. | Course | Govt. Seats in Private College | Management Seats | Fees Fixed for Govt. Seats in Private colleges (Rs. Per Year) 2021-22 academic year | Revision in fees requested by Karnataka State Private Pharmacy college management association (Rs. Per Year) for the academic year 2023-24 |
|---|---|---|---|---|---|
| 1 | D.Pharm | 30% | 70% | 13,000/- | 35,000/- |
| 2 | B. Pharm | 30% | 70% | 26,000/- | 55,000/- |
| 3 | M. Pharm | 30% | 70% | 52,000/- | 1,00,000/- |
| 4 | Pharm D | 30% | 70% | 67,000/- | 1,20,000/- |
| 5 | Pharm D (PB) | 30% | 70% | 1,08,000/- | 1,58,000/- |

**ಟಿಪ್ಪಣಿ:** ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಶುಲ್ಕಗಳನ್ನು ಸೇರಿಸಿ, ಶುಲ್ಕ ನಿಗದಿಪಡಿಸಲಾಗಿದೆ.

ಮೇಲೆ ಓದಲಾದ ಕ್ರ ಸಂ. (3)ರ ಸಭಾ ನಡವಳಿಯಲ್ಲಿ, 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಫಾರ್ಮಸಿ ಕೋರ್ಸುಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಕೋಟಾ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ ಕರ್ನಾಟಕ ಫಾರ್ಮಸಿ ಕಾಲೇಜು ಮ್ಯಾನೇಜ್ ಮೆಂಟ್ ಅಸೋಸಿಯೇಷನ್ ಪ್ರತಿನಿಧಿಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿಗೆ ಶುಲ್ಕ ಮತ್ತು ಸೀಟು ಹಂಚಿಕೆಯಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

1. ಸೀಟು ಹಂಚಿಕೆಯನ್ನು ಯಥಾಸ್ಥಿತಿ ಮುಂದುವರೆಸಲು ನಿರ್ಧರಿಸಲಾಯಿತು.
2. ಶುಲ್ಕದಲ್ಲಿ 10%ರಂತೆ ಹೆಚ್ಚುವರಿ ಮಾಡಲು ನಿರ್ಧರಿಸಲಾಯಿತು.

## ಸರ್ಕಾರದ ಆದೇಶ ಸಂಖ್ಯೆ: ಆಕುಕ 123 ಐಎಂಎಂ 2023, ದಿನಾಂಕ: 01.09.2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಫಾರ್ಮಸಿ ಶಿಕ್ಷಣ ಸಂಸ್ಥೆಗಳಲ್ಲಿರುವ ಡಿ. ಫಾರ್ಮಸಿ, ಬಿ. ಫಾರ್ಮಸಿ, ಬಿ. ಫಾರ್ಮಸಿ (ಲ್ಯಾಟರಲ್ ಎಂಟ್ರಿ) ಫಾರ್ಮ-ಡಿ, ಫಾರ್ಮ-ಡಿ (ಪೋಸ್ಟ್ ಬ್ಯಾಕ್ಯುಲರೇಟ್) ಹಾಗೂ ಎಂ. ಫಾರ್ಮ ಕೋರ್ಸ್‌ಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಸೀಟು ಅನುಪಾತ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಿದೆ.

| Sl. No. | Course | Govt. Seats in Private College | Management Seats | Fees Fixed for Govt. Seats in Private colleges (Rs. Per Year) 2021-22 academic year | Fees Fixed for Govt. Seats in Private colleges (Rs. Per Year) 2023-24 academic year |
|---|---|---|---|---|---|
| 1 | D.Pharm Course (Stand alone) | 20% | 80% | 13,000/- | 14,300/- |
| 2 | D.Pharm | 30% | 70% | 13,000/- | 14,300/- |
| 3 | B. Pharm | 30% | 70% | 26,000/- | 28,600/- |
| 4 | M. Pharm | 30% | 70% | 52,000/- | 57,200/- |
| 5 | Pharm D | 30% | 70% | 67,000/- | 73,700/- |
| 6 | Pharm D (PB) | 30% | 70% | 1,08,000/- | 1,18,000/- |

**ಟಿಪ್ಪಣಿ:** ರಾಜೀವ್‌ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಶುಲ್ಕಗಳನ್ನು ಸೇರಿಸಿ, ಶುಲ್ಕ ನಿಗದಿಪಡಿಸಲಾಗಿದೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2025-26 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಡಿ.ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಕೋಟಾದ ಸೀಟುಗಳ ಹಂಚಿಕೆ ಅನುಪಾತ ಮತ್ತು ಶುಲ್ಕ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಅಕುಕ 123 ಐಎಂಎಂ 2023, ಬೆಂಗಳೂರು, ದಿನಾಂಕ: 01.09.2023.
2. ಸರ್ಕಾರದ ಆದೇಶ ಸಂಖ್ಯೆ ಆಕುಕ 394 ಪಿಐಎಂ 2025, ಬೆಂಗಳೂರು, ದಿನಾಂಕ: 09.09.2025.
3. ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರ ಏಕ ಕಡತ ಸಂಖ್ಯೆ DCDHO/ADMN/229/2025-GCPರ ಪ್ರಸ್ತಾವನೆ.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ, 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಫಾರ್ಮಸಿ ಶಿಕ್ಷಣ ಸಂಸ್ಥೆಗಳಲ್ಲಿರುವ ಎಲ್ಲಾ ಫಾರ್ಮಸಿ ಕೋರ್ಸುಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಸೀಟುಗಳ ಅನುಪಾತ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ಶುಲ್ಕವನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ, 2025-26ನೇ ಶೈಕ್ಷಣಿಕ ಸಾಲಿನಿಂದ ರಾಜ್ಯ ಡಿ.ಫಾರ್ಮಸಿ ಕೋರ್ಸಿನ ಪ್ರವೇಶಕ್ಕೆ ಸರ್ಕಾರಿ / ಖಾಸಗಿ ಕೋಟಾದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಿಗದಿಪಡಿಸಿದ ಮೆರಿಟ್ ಆಧಾರದ ಮೇರೆಗೆ ಕೌನ್ಸಿಲಿಂಗ್ ಮೂಲಕ ಹಂಚಿಕೆ ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ, ಆಯುಕ್ತರು, ಆಹಾರ ಸುರಕ್ಷತೆ ಹಾಗೂ ಔಷಧ ಆಡಳಿತ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಅಕುಕ 123 ಐಎಂಎಂ 2023, ದಿನಾಂಕ: 01.09.2023 ರಲ್ಲಿ, ಖಾಸಗಿ ಡಿ.ಫಾರ್ಮ ಕೋರ್ಸಿಗೆ 20% ಮತ್ತು 30% ಸರ್ಕಾರಿ ಕೋಟಾಗಳ ಸೀಟುಗಳು standalone ಡಿ.ಫಾರ್ಮ ಕಾಲೇಜುಗಳಲ್ಲಿ ಹಾಗೂ integrated ಡಿ.ಫಾರ್ಮ ಕಾಲೇಜುಗಳಲ್ಲಿ ಸೀಟುಗಳು ಕ್ರಮವಾಗಿ ಹಂಚಿಕೆಯಾಗುತ್ತಿದ್ದು, ಈ ಎಲ್ಲಾ ಸರ್ಕಾರಿ ಕೋಟಾ ಸೀಟುಗಳು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿತ್ತು. 2025-26 ನೇ ಶೈಕ್ಷಣಿಕ ಸಾಲಿಗೆ ಡಿ.ಫಾರ್ಮ ಕಾಲೇಜುಗಳ ಸಂಘದವರೊಂದಿಗೆ consensual agreement ಮಾಡಿಕೊಳ್ಳುವ ಸಂಬಂಧ ದಿನಾಂಕ 08.10.2025 ರಂದು Karnataka Private College Management Association ರವರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಮುಂದುವರೆದು, ದಿನಾಂಕ 02.12.2025 ರಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಖಾಸಗಿ ಫಾರ್ಮಸಿ ಕಾಲೇಜುಗಳು ಮ್ಯಾನೇಜ್ ಮೆಂಟ್ ಅಸೋಷಿಯೇಷನ್ ರವರೊಂದಿಗೆ Consensual agreement ಮಾಡಿಕೊಂಡು ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

i. The fees for the academic year 2025-26 beings ₹14,300 for Karnataka students for Government seats in Private colleges and ₹ 17,500 for non-Karnataka students who get selected under the Government quota seats.

ii. Unfilled seats in government quota in private colleges for students-

. . . 2

-of Karnataka will be filled by non-Karnataka after de-categorization.

iii. To collect the registration and eligibility fee for non Karnataka students admitted under the Government quota on par with Karnataka students.

iv. For the remaining seats the fee structure to be uploaded in the website of respective colleges as well as Board of Examination Authority.

v. To bring an advertisement publishing the process of admission and counselling by the Board of Examination Authority.

ಕೌನ್ಸಿಲಿಂಗ್ ಸಮಯದಲ್ಲಿ ಭರ್ತಿಯಾಗದ ಸರ್ಕಾರಿ ಕೋಟಾ ಅಥವಾ ಖಾಸಗಿ ಕೋಟಾ ಸೀಟುಗಳನ್ನು ನರ್ಸಿಂಗ್ ಮತ್ತು ಇತರ ಕೋರ್ಸುಗಳಲ್ಲಿ ಭರ್ತಿ ಮಾಡಿಕೊಳ್ಳುವ ಮಾದರಿಯಲ್ಲಿ ಅದೇ ವರ್ಗದ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳಬಹುದಾಗಿದೆ. ಆದ್ದರಿಂದ, 2025-26ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಡಿ.ಫಾರ್ಮಸಿ ಕೋರ್ಸಿನ ಸರ್ಕಾರಿ / ಖಾಸಗಿ ಕೋಟಾದ ಸೀಟುಗಳಿಗೆ ಕೆಳಕಂಡಂತೆ ವರ್ಗ, ಅನುಪಾತ ಹಾಗೂ ಶುಲ್ಕವನ್ನು ನಿಗದಿಪಡಿಸಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಸೂಕ್ತ ಆದೇಶ ಹೊರಡಿಸುವಂತೆ ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರು ಕೋರಿರುತ್ತಾರೆ.

a. To fix the fees for the academic year 2025-26 as ₹14,300 for Karnataka students for Government seats in Private colleges and ₹17,500 for non-Karnataka students who get selected under the Government quota seats.

b. To fill the unfilled seats in government quota in private colleges for students of Karnataka with students of non Karnataka (Indian nationals only) after decategorization round.

c. Fixing the registration and eligibility fee for non Karnataka students admitted under the Government quota on par with Karnataka students.

d. A condition to upload the fee structure for the remaining seats on the websites of respective colleges as well as Board of Examination Authority, FDA.

e. Permitting to publish an advertisement on the process of admission and counselling for Karnataka and Non-Karnataka students in Government quota in private colleges by the Board of Examination Authority.

ಆಯುಕ್ತರು, ಆಹಾರ ಸುರಕ್ಷತೆ ಹಾಗೂ ಔಷಧ ಆಡಳಿತ ಇವರು ಸಲ್ಲಿಸಿರುವ ಪ್ರಸ್ತಾವನೆ, Karnataka Private College Management Association ರವರ ಮನವಿಯನ್ನು ಮತ್ತು ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 122 ಐಎಂಎಂ 2025, ಬೆಂಗಳೂರು,**
**ದಿನಾಂಕ 11.12.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಡಿ.ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಕೋಟಾದ-

. . . 3

-ಸೀಟುಗಳ ಹಂಚಿಕೆ ಅನುಪಾತ ಮತ್ತು ಶುಲ್ಕವನ್ನು ಈ ಕೆಳಕಂಡಂತೆ ಹಾಗೂ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ನಿಗದಿಪಡಿಸಿ ಆದೇಶಿಸಿದೆ.

| Sl No | Course | Govt. Quota Seats in Private College | Fees Fixed for Karnataka students for Government Seats in Private college (in ₹) | Fees Fixed for Non-Karnataka students for Government Seats in Private college (in ₹) |
|---|---|---|---|---|
| 1 | D.Pharm course (standalone colleges) | 20% | 14,300/- | 17,500/- |
| 2 | D.Pharm course (integrated colleges) | 30% | 14,300/- | 17,500/- |

**ಷರತ್ತು ಮತ್ತು ನಿಬಂಧನೆಗಳು:**

1. ಕರ್ನಾಟಕದ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ಹಂಚಿಕೆಯಾಗಿರುವ 20% ಮತ್ತು 30% ಸೀಟುಗಳಲ್ಲಿ ಭರ್ತಿಯಾಗದಿರುವ ಸೀಟುಗಳನ್ನು ಕರ್ನಾಟಕೇತರ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾ ಸೀಟುಗಳಿಗೆ ಮಾತ್ರ ಹಂಚಿಕೆ ಮಾಡತಕ್ಕದ್ದು. ತದನಂತರ, ಭರ್ತಿಯಾಗದೇ ಉಳಿದ ಸೀಟುಗಳನ್ನು ಆಡಳಿತ ಮಂಡಳಿಯು ಭರ್ತಿ ಮಾಡತಕ್ಕದ್ದು.
2. ಕರ್ನಾಟಕದ ವಿದ್ಯಾರ್ಥಿಗಳಿಗೆ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ಭರ್ತಿಯಾಗದ ಸೀಟುಗಳನ್ನು ವರ್ಗೀಕರಣ ಸುತ್ತಿನ ನಂತರ ಕರ್ನಾಟಕೇತರ (ಭಾರತೀಯ ಪ್ರಜೆಗಳಿಗೆ ಮಾತ್ರ) ವಿದ್ಯಾರ್ಥಿಗಳಿಂದ ಭರ್ತಿ ಮಾಡತಕ್ಕದ್ದು.
3. ಸರ್ಕಾರಿ ಕೋಟಾದಡಿಯಲ್ಲಿ ಪ್ರವೇಶ ಪಡೆಯುವ ಕರ್ನಾಟಕೇತರ ವಿದ್ಯಾರ್ಥಿಗಳಿಗೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಸಮಾನವಾಗಿ ಪರೀಕ್ಷಾ ಪ್ರಾಧಿಕಾರ ಮಂಡಳಿಯು ನೋಂದಣಿ ಮತ್ತು ಅರ್ಹತಾ ಶುಲ್ಕವನ್ನು ನಿಗದಿಪಡಿಸತಕ್ಕದ್ದು.
4. ಉಳಿದ ಸೀಟುಗಳ ಶುಲ್ಕ ರಚನೆಯನ್ನು ಆಯಾ ಕಾಲೇಜುಗಳ ವೆಬ್‌ಸೈಟ್‌ಗಳಲ್ಲಿ ಹಾಗೂ ಪರೀಕ್ಷಾ ಪ್ರಾಧಿಕಾರದ ಮಂಡಳಿ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಲ್ಲಿ ಅಪ್‌ಲೋಡ್ ಮಾಡತಕ್ಕದ್ದು.
5. ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದಲ್ಲಿ ಕರ್ನಾಟಕ ಮತ್ತು ಕರ್ನಾಟಕೇತರ ವಿದ್ಯಾರ್ಥಿಗಳಿಗೆ ಪ್ರವೇಶ ಮತ್ತು ಕೌನ್ಸೆಲಿಂಗ್ ಪ್ರಕ್ರಿಯೆಯ ಕುರಿತು ಜಾಹೀರಾತು ಪ್ರಕಟಿಸಲು ಪರೀಕ್ಷಾ ಪ್ರಾಧಿಕಾರ ಮಂಡಳಿ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11/12

**(ಶ್ರೀಪತಿ ಪಿ.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಭಾವೈಪ. ಮತ್ತು ಸಮನ್ವಯ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ / ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆಪೆಟ್ಟಿಗೆ ಸಂಖ್ಯೆ 5368, ಬೆಂಗಳೂರು-560 001.

2. ಪ್ರಧಾನ ಮಹಾಲೇಖಪಾಲರು, (ಎ&ಇ), ಪಾರ್ಕ್‌ಹೌಸ್ ರಸ್ತೆ, ಪಿ.ಬಿ.ನಂ. 5329, ಕರ್ನಾಟಕ, ಬೆಂಗಳೂರು – 560 001.
3. ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಅರಮನೆ ರಸ್ತೆ, ಬೆಂಗಳೂರು.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸುಬ್ಬಯ್ಯ ರಸ್ತೆ, ಬೆಂಗಳೂರು.
6. Karnataka Private College Management Association ರವರಿಗೆ (ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರ ಮುಖಾಂತರ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

GOVERNMENT OF KARNATAKA
(FOOD SAFETY AND DRUG ADMINISTRATION)
GOVERNMENT COLLEGE OF PHARMACY
No.2, P.Kalinga Rao Road, Subbaiah circle, Bangalore-560 027

email: gcp.dcd-ka@nic.in
principal.gcp123@gmail.com

website: www.govtcopblr.org
Phone No: 080-22222681
Fax No: 080-22270666

## FEES FOR GOVERNMENT COLLEGE OF PHARMACY, BANGALORE

## I B.PHARM ADMISSION FEES 2026-27

| B.PHARM 1ST YEAR | | |
|---|---|---|
| **SL. No.** | **Particulars** | **Amount** |
| 1 | Tution Fees | 6600/- |
| 2 | Laboratory Fees | 100/- |
| 3 | Teachers Welfare Fund | 30/- |
| 4 | Magazine Fees | 50/- |
| 5 | Aluminum Association Fees | 100/- |
| 6 | Medical Examination Fes | 50/- |
| 7 | Caution Money Deposit | 500/- |
| 8 | Student Union Fees | 400/- |
| 9 | Sports Fees | 100/- |
| 10 | Admission Fees | 300/- |
| 11 | Registration Fees | 2000/- |
| 12 | Sports Fees | 800/- |
| 13 | Students Welfare Fund | 400/- |
| 14 | Helinet Registration Fees | 2000/- |
| 15 | Helinet Fees | 100/- |
| **GRAND TOTAL** | | **13530/-** |

PRINCIPAL
Government College of Pharmacy
Bangalore - 27

GOVERNMENT OF KARNATAKA
(FOOD SAFETY AND DRUG ADMINISTRATION)
GOVERNMENT COLLEGE OF PHARMACY
No.2, P.Kalinga Rao Road, Subbaiah circle, Bangalore-560 027

email: gcp.dcd-ka@nic.in
principal.gcp123@gmail.com

website: www.govtcopblr.org
Phone No: 080-22222681
Fax No: 080-22270666

## FEES FOR GOVERNMENT COLLEGE OF PHARMACY, BANGALORE

### I M.PHARM ADMISSION FEES 2026-27

| M.PHARM 1ST YEAR | | |
|---|---|---|
| SL. No. | Particulars | Amount |
| 1 | Tution Fees | 10000/- |
| 2 | Laboratory Fees | 1000/- |
| 3 | Admission Fees | 100/- |
| 4 | Sports Fees | 100/- |
| 5 | Library & Reading Room Fees | 500/- |
| 6 | Aluminum Association Fees | 100/- |
| 7 | Magazine Fees | 50/- |
| 8 | Medical Examination Fes | 50/- |
| 9 | Caution Money Deposit | 2000/- |
| 10 | Registration Fees | 2000/- |
| 11 | Admission Fees | 300/- |
| 12 | Helinet Fees | 2000/- |
| 13 | Sports Fees | 400/- |
| 14 | Student Welfare fund fee | 200/- |
| 15 | Additional Examination Fee | 2000/- |
| **GRAND TOTAL** | | **20,800/-** |

PRINCIPAL
Government College of Pharmacy
Bangalore - 27

GOVERNMENT OF KARNATAKA
(FOOD SAFETY AND DRUG ADMINISTRATION)
GOVERNMENT COLLEGE OF PHARMACY
No.2, P.Kalinga Rao Road, Subbaiah circle, Bangalore-560 027

email: gcp.dcd-ka@nic.in
principal.gcp123@gmail.com

website: www.govtcopblr.org
Phone No: 080-22222681
Fax No: 080-22270666

## FEES FOR GOVERNMENT COLLEGE OF PHARMACY, BANGALORE

## I D.PHARM ADMISSION FEES 2026-27

| D.PHARM 1ST YEAR | | |
|---|---|---|
| **SL. No.** | **Particulars** | **Amount** |
| 1 | Admission Fees | 05/- |
| 2 | Tution Fees | 150/- |
| 3 | Registration Fees | 250/- |
| 4 | Library & Reading Room Fees | 15/- |
| 5 | Caution Money Deposit | 100/- |
| 6 | Magazine Fees | 15/- |
| 7 | Sports Fees | 20/- |
| 8 | Aluminum Association Fees | 10/- |
| 9 | Medical Examination Fes | 05/- |
| **GRAND TOTAL** | | **570/-** |

PRINCIPAL
Government College of Pharmacy
Bangalore - 27